REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 । ಸಂಚಿಕೆ : 34 । ನವೆಂಬರ್ 29, 2023 । ಬುಧವಾರ । ಪುಟಗಳು : 8 । ಬೆಲೆ : 2/-

## ಹುಬ್ಬಳ್ಳಿಯಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ದೇಶಕ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ



**ಹುಬ್ಬಳ್ಳಿ :** ದಿನಾಂಕ : 24.11.2023ರಂದು ಹುಬ್ಬಳ್ಳಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ನಿರ್ದೇಶಕ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು.

ಈ ವಿಚಾರ ಸಂಕಿರಣವನ್ನು ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ವಿಕ್ರಮ ಆರ್. ಸಿರೂರರವರು ಉದ್ಘಾಟಿಸಿ ಮಾತನಾಡಿ ಮಹಾಮಂಡಳವು ಈಗಾಗಲೇ ತಿಳಿದಿರುವಂತೆ ಹಲವಾರು ವಿಷಯಗಳ ಬಗ್ಗೆ ವಿಚಾರ ಸಂಕಿರಣ, ತರಬೇತಿ ಶಿಬಿರ, ಕಾರ್ಯಾಗಾರಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಆಯೋಜಿಸಿಕೊಂಡು ಬರುತ್ತಿದೆ. ಆದರೆ ಈಗ ನಮ್ಮ ಹುಬ್ಬಳ್ಳಿಯಲ್ಲಿ ವಿಚಾರ ಸಂಕಿರಣ ಹಮ್ಮಿಕೊಂಡಿರುವುದು ಅತ್ಯಂತ ಸಂತೋಷದ ಸಂಗತಿ. ಆಡಳಿತ ಮಂಡಳಿಯ ವೃತ್ತಿಪರತೆ ಮತ್ತು ಸಿಬ್ಬಂದಿ ವರ್ಗದ ವೃತ್ತಿಪರತೆ ಹೆಚ್ಚಿಸಲು ಇಂತಹ ವಿಚಾರ ಸಂಕಿರಣಗಳು ಉಪಯುಕ್ತವಾಗುತ್ತವೆ. ಈ ವಿಚಾರ ಸಂಕಿರಣದಲ್ಲಿ ನೀಡುವ ಉಪನ್ಯಾಸಗಳನ್ನು ತಿಳಿದುಕೊಂಡು ಬ್ಯಾಂಕಿನ ಪ್ರಗತಿಗೆ ಶ್ರಮಿಸಬೇಕೆಂದರು.

ಮಹಾಮಂಡಳದ ವಿಶೇಷ ಆಹ್ವಾನಿತರಾದ ಶ್ರೀ ರಾಜಶೇಖರ್ ಎಸ್. ಹಾವಣಗಿರವರು ಮಾತನಾಡಿ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲಿಕ್ಕೆ ಇಂತಹ ವಿಚಾರ

2ನೇ ಪುಟಕ್ಕೆ...





3 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭ

4 ಸಹಕಾರದ ಮೂಲಕ ಅಬಲ ವರ್ಗದವರನ್ನು ಸಬಲೀಕರಣಗೊಳಿಸಲು ಸಾಧ್ಯ : ಶ್ರೀ ಜಿ.ಎಸ್. ಪಲ್ಲೇದ

6 ಚೈತನ್ಯ ಮಹಿಳಾ ಸಹಕಾರ ಬ್ಯಾಂಕ್ ನಿ., ವಿಜಯಪುರ : ನೂತನ ಶಾಖೆಗಳ ಉದ್ಘಾಟನೆ

ಸಂಪಾದಕೀಯ

## ಅತ್ಮೀಯ ಸಹಕಾರಿಗಳೇ...



# ನಮ್ಮ ಸಂವಿಧಾನದ ಆಶಯಗಳನ್ನು ಅರ್ಥ ಮಾಡಿಕೊಳ್ಳಬೇಕಾದ ಸಮಯ

ನವೆಂಬರ್ 26, ತುಂಬ ಭಾರತೀಯರಾದ ನಮಗೆ ಮಹತ್ವದ ದಿನ. ನಮ್ಮ ದೇಶ ಸ್ವಾತಂತ್ರ್ಯಗೊಂಡ ನಂತರ ನಮ್ಮದೇ ಆದ ಒಂದು ಸಂವಿಧಾನವನ್ನು ರೂಪಿಸುವ ಬೃಹತ್ ಕೆಲಸವನ್ನು ಸಂವಿಧಾನ ರಚನಾ ಸಭೆಗೆ ವಹಿಸಲಾಯಿತು. ಈ ಸಂವಿಧಾನ ರಚನಾ ಸಭೆಯಲ್ಲಿ, ದೇಶದ ವಿವಿಧ ರಾಜ್ಯಗಳ, ಧರ್ಮಗಳ, ಭಿನ್ನ ಭಾಷೆ, ಸಂಸ್ಕೃತಿಗೆ ಸೇರಿರುವ ಹಾಗೂ ಎಡ– ಬಲಪಂಥಿಯರು ಸೇರಿದಂತೆ 250 ಮಹಾ ಮೇಧಾವಿ ಸದಸ್ಯರಿದ್ದರು. ಈ ಸಭೆಗೆ ಮುಖ್ಯಸ್ಥರಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ನಿಯೋಜಿಲಾಗಿತ್ತು.

ಸಂವಿಧಾನ ರಚನಾ ಸಭೆ ಎರಡು ವರ್ಷ ಹನ್ನೊಂದು ತಿಂಗಳು ಹದಿನೆಂಟು ದಿನಗಳ ಸುದೀರ್ಘ ಕಾಲ ಐದು ಅಧಿವೇಶನಗಳನ್ನು ನಡೆಸಿ, ಹಲವು ಚರ್ಚೆ, ಸಂವಿಧಾನ ಹೇಗಿರಬೇಕೆಂಬುದರ ಬಗ್ಗೆ ಪರ–ವಿರೋಧ ಮಾತುಗಳ ನಂತರ, ಎಲ್ಲರಿಗೂ ಒಪ್ಪಿತವಾದ ಒಂದು ಸಂವಿಧಾನದ ಕರಡನ್ನು ರೂಪಿಸಿ ಸಂವಿಧಾನ ಸಭೆಯಲ್ಲಿ ಮಂಡಿಸಲಾಯಿತು.

ಸಂವಿಧಾನದ ಕರಡಿಗೆ ಒಪ್ಪಿಗೆ ನೀಡುವುದಕ್ಕೂ ಮೊದಲು, ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು ಸಭೆಯನ್ನು ಉದ್ದೇಶಿಸಿ, 'ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕಿಂತಲೂ ದೇಶ ಕಟ್ಟುವ ಈ ಪ್ರಕ್ರಿಯೆಯೇ ಹೆಚ್ಚು ಮಹತ್ವದ್ದು ಮತ್ತು ಹೆಚ್ಚು ಕಠಿಣವಾದುದು. ಸಂವಿಧಾನ ಒಂದು ಯಂತ್ರದ ಹಾಗೆ, ಅದಕ್ಕೆ ಜೀವವಿಲ್ಲ. ಸಂವಿಧಾನವನ್ನು ಯಾರು ನಿಯಂತ್ರಿಸುತ್ತಾರೋ, ಯಾರು ಅದನ್ನು ಕಾರ್ಯಗತಗೊಳಿಸುತ್ತಾರೋ ಅವರಿಂದಲೇ ಅದಕ್ಕೆ ಜೀವ ಬರುತ್ತದೆ. ಆದ್ದರಿಂದ, ಜನರು ಆಯ್ಕೆ ಮಾಡುವ ವ್ಯಕ್ತಿ ಸದ್ಗುಣಿಯಾಗಿರಬೇಕು, ಆತನಿಗೆ ಎಲ್ಲರನ್ನೂ ಒಳಗೊಳ್ಳುವ ಗುಣ ಇರಬೇಕು. ಒಂದು ವೇಳೆ ಜನರು ಆಯ್ಕೆ ಮಾಡಿದ ವ್ಯಕ್ತಿಗೆ ಈ ಯಾವ ಗುಣಗಳೂ ಇಲ್ಲದಿದ್ದರೆ, ಸಂವಿಧಾನವೂ ಈ ದೇಶವನ್ನು ರಕ್ಷಿಸಲು ಸಾಧ್ಯವಿಲ್ಲ...' ಎಂದು ನುಡಿದರು. ನಂತರ, ಸಂವಿಧಾನವನ್ನು ಎಲ್ಲ ಸದಸ್ಯರ ಒಕ್ಕೊರಳ ಸಮ್ಮತಿಯೊಂದಿಗೆ ಎಲ್ಲರ ಬಾರಿ ಕರತಾಡನದೊಂದಿಗೆ ಅಂಗೀಕರಿಸಿ, ಅಳವಡಿಕೆ ಮಾಡಿಕೊಳ್ಳಲಾದ ದಿನ 1949ರ ನವಂಬರ್ 26ರಂದು. ಅಂದು ನ್ಯಾಯ ಹಾಗೂ ಸಮಾನತೆಯ ಆಧಾರದಲ್ಲಿ ದೇಶದ ಪುನರ್ ನಿರ್ಮಾಣ ಕಾರ್ಯಕ್ಕೆ ನಮ್ಮ ಗಣರಾಜ್ಯವು ಮುಂದಾಗಬೇಕೆಂದು ಸಂವಿಧಾನ ಸಭೆ ನಿರ್ದೇಶಿಸಿತು. ಈ ನಿರ್ದೇಶನವು ಸಂವಿಧಾನದ ಪ್ರಸ್ತಾವನೆಯ ಅರ್ಥಪೂರ್ಣ ಭಾಗವಾಗಿದ್ದು, ನಾವೆಲ್ಲರೂ ಪಠಿಸೋಣ ಬನ್ನಿ ...

"ಭಾರತದ ಜನಗಳಾದ ನಾವು,
ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ,
ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ:
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ:
ಸ್ಥಾನಮಾನ ಹಾಗೂ ಅವಕಾಶ ಸಮಾನತೆ ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು
ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃತ್ವಭಾವನೆಯನ್ನು ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;
ನಮ್ಮ ಸಂವಿಧಾನ ಸಭೆಯಲ್ಲಿ 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ"

▸▸ ಎಚ್.ಕೆ. ಪಾಟೀಲ

...1ನೇ ಪುಟದಿಂದ

ಸಂಕಿರಣಗಳು ಅನುಕೂಲವಾಗುತ್ತವೆ. ಇಂತಹ ವಿಚಾರ ಸಂಕಿರಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳು ಪಾಲ್ಗೊಂಡು ವಿಚಾರ ಸಂಕಿರಣದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದರು.

ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ವೀರಮ್ಮ ಪಿ. ರವರು ಮಾತನಾಡಿ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ನಮ್ಮ ಬ್ಯಾಂಕುಗಳ ನಿರ್ದೇಶಕ ಮಂಡಳಿ ಸದಸ್ಯರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಬಂದಿರುತ್ತದೆ. ಪ್ರತಿ ತಿಂಗಳಿಗೊಮ್ಮೆ ತರಬೇತಿ ವಿಚಾರ ಸಂಕಿರಣ ಕಾರ್ಯಾಗಾರಗಳು, ಹಾಗೇಯೇ ಎಲ್ಲರ ಬುದ್ಧಿಮತ್ತೆ ಹೆಚ್ಚಿಸುವ ಕಾರ್ಯಕ್ರಮಗಳನ್ನು ನಮ್ಮ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ. ಪಾಟೀಲರ ನಿರ್ದೇಶನದ ಅನ್ವಯ ಮಹಾಮಂಡಳ ಆಯೋಜಿಸುತ್ತಾ ಬಂದಿದೆ. ಇಂದು ಹುಬ್ಬಳ್ಳಿಯಲ್ಲಿ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮವು ಒಂದು ಮೈಲು ಗಲ್ಲಾಗಬೇಕೆಂದು ಆಶಿಸುತ್ತೇನೆ ಎಂದರು.

ಈ ವಿಚಾರ ಸಂಕಿರಣದಲ್ಲಿ ನಿರ್ದೇಶಕ ಮಂಡಳಿಯ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಯವರ ಕರ್ತವ್ಯ ಹಾಗೂ ಹೊಣೆಗಾರಿಕೆಗಳ ಕುರಿತು ಕೆನರಾ ಬ್ಯಾಂಕಿನ ನಿವೃತ್ತ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಜನಾರ್ಧನ ಪಿ. ಸೌಕರ, ಇತ್ತೀಚಿನ ಭಾರತೀಯ ರಿಜರ್ವ್ ಬ್ಯಾಂಕಿನ ನಿರ್ದೇಶನಗಳ ಕುರಿತು ಮಹಾಮಂಡಳದ ಬ್ಯಾಂಕಿಂಗ್ ಸಲಹೆಗಾರರಾದ ಶ್ರೀ ಸುಧಾಕರ ಭಟ್, ಡಿಜಿಟಲೈಸಿಂಗ್ ಕೋ–ಆಪರೇಟಿವ್ ಮತ್ತು ಬ್ಯಾಂಕ್ಸ್ ಹೂಡಿಕೆಗಳು (ಸರ್ಕಾರಿ ಭದ್ರತೆ) ಕುರಿತು ಇಂಡಿಯನ್ ಬ್ಯಾಂಕ್ ಅಲಹಾಬಾದ ಇದರ ವಲಯ ಪ್ರಬಂಧಕರಾದ ಶ್ರೀ ವಿ. ಗೋವಿಂದರಾಜುರವರುಗಳು ಉಪನ್ಯಾಸ ನೀಡಿದರು.

ಪ್ರಾರಂಭದಲ್ಲಿ ಈ ವಿಚಾರ ಸಂಕಿರಣಕ್ಕೆ ಆಗಮಿಸಿದ್ದ ಪಟ್ಟಣ ಸಹಕಾರ ಬ್ಯಾಂಕುಗಳ ಪ್ರತಿನಿಧಿಗಳನ್ನು ಹಾಗೂ ಗಣ್ಯರನ್ನು ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ವೀರಮ್ಮ ಪಿ ರವರು ಸ್ವಾಗತಿಸಿ, ಕೊನೆಯಲ್ಲಿ ವಂದನಾರ್ಪಣೆ ಸಲ್ಲಿಸಿದರು. ಈ ವಿಚಾರ ಸಂಕಿರಣದಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಂದ ಸುಮಾರು 130ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ, ವಿಚಾರ ಸಂಕಿರಣದ ಸದುಪಯೋಗ ಪಡೆದುಕೊಂಡರು.

## 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭ

# ರಾಜ್ಯ ಆರ್ಥಿಕ ಬೆಳವಣಿಗೆಗೆ ಸಹಕಾರ ಕ್ಷೇತ್ರದ ಕೊಡುಗೆ ಅಪಾರವಾಗಿದೆ : ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ



ವಿಜಯಪುರ : ರಾಜ್ಯದ ವಿವಿಧ ಸಹಕಾರ ಸಂಸ್ಥೆಗಳ ಸಹಯೋಗದಲ್ಲಿ ಏರ್ಪಡಿಸಲಾಗಿದ್ದ 70ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭ, ಸಹಕಾರ ರತ್ನ ಪ್ರಶಸ್ತಿ ಪ್ರದಾನ ಹಾಗೂ ವಿಜಯಪುರ ಡಿಸಿಸಿ ಬ್ಯಾಂಕಿನ ಶತಮಾನೋತ್ಸವ ಭವನ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು, ಜನಸಾಮಾನ್ಯರ ಬದುಕಿನ ಎಲ್ಲಾ ಸ್ಥರಗಳನ್ನು ಆವರಿಸಿಕೊಂಡಿರುವ ಸಹಕಾರ ಕ್ಷೇತ್ರ ಬಲಿಷ್ಠವಾಗಿ ಬೆಳೆಯಲಿ ಹಾಗೂ ದೇಶದಲ್ಲಿ ಜಾತ್ಯಾತೀತವಾಗಿ, ಪಕ್ಷಾತೀತವಾಗಿ ಕೆಲಸ ಮಾಡುವ ಕ್ಷೇತ್ರವಾಗಿ ಸಹಕಾರ ವಲಯ ಹೊರಹೊಮ್ಮಲಿ ಎಂದರು.

ನಂತರ ಮುಂದುವರೆದು ಮಾತನಾಡಿದ ಮುಖ್ಯಮಂತ್ರಿಗಳು, ಸಹಕಾರ ಚಳವಳಿ ಸ್ವಾತಂತ್ರ್ಯಪೂರ್ವದಲ್ಲಿಯೇ ಆರಂಭವಾಗಿದ್ದು, ಪ್ರಸ್ತುತ ರಾಜ್ಯದಲ್ಲಿ ಸುಮಾರು 45 ಸಾವಿರ ಸಹಕಾರ ಸಂಸ್ಥೆಗಳು, ಹಾಗೆಯೇ ದೇಶದಲ್ಲಿ 8.50 ಲಕ್ಷ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ರಾಜ್ಯ ಹಾಗೂ ರಾಷ್ಟ್ರದ ಆರ್ಥಿಕ ಬೆಳವಣಿಗೆಗೆ ಸಹಕಾರ ಕ್ಷೇತ್ರದ ಕೊಡುಗೆ ಅಪಾರವಾಗಿದೆ ಎಂದರು.

ಯಾವುದೇ ಒಂದು ವಲಯದ ಬೆಳವಣಿಗೆಗೆ ಸಹಕಾರ ಬೇಕೇ ಬೇಕು. ಎಲ್ಲಾ ರಂಗಗಳಲ್ಲಿಯೂ ಸಹಕಾರ ಕ್ಷೇತ್ರ ತನ್ನ ಛಾಪನ್ನು ಮೂಡಿಸಿದ್ದು, ಜನರ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗೆ ತನ್ನದೇ ಆದ ಕೊಡುಗೆ ನೀಡುತ್ತಿದೆ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ಸಹಕಾರ ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡುತ್ತಾ, ಸಹಕಾರ ಸಂಸ್ಥೆಗಳ ಸಿಬ್ಬಂದಿಗಳಿಗೆ ಸೇವಾ ಭದ್ರತೆ ಒದಗಿಸಲು, ಸಹಕಾರಿ ಆಂದೋಲನವನ್ನು ಮತ್ತಷ್ಟು ಗಟ್ಟಿಗೊಳಿಸಲು ಸಹಕಾರ ಕಾಯಿದೆ ಹಾಗೂ ಕಾನೂನಿಗೆ ಅಗತ್ಯ ತಿದ್ದುಪಡಿ ತರಲು ಈಗಾಗಲೇ ಸಹಕಾರ ಕಾನೂನು ತಿದ್ದುಪಡಿ ಸಮಿತಿಯನ್ನು ರಚಿಸಲಾಗಿದೆ. ಸಹಕಾರ ಚಳವಳಿಯನ್ನು ಜನರ ಆಂದೋಲನವನ್ನಾಗಿ ಪರಿವರ್ತಿಸಲು ಪ್ರಯತ್ನ ನಡೆಸಲಾಗುತ್ತಿದೆ ಎಂದರು.

ಸಕ್ಕರೆ, ಜವಳಿ ಮತ್ತು ಕೃಷಿ ಮಾರುಕಟ್ಟೆ ಸಚಿವರು ಹಾಗೂ ವಿಜಯಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶಿವಾನಂದ ಪಾಟೀಲ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ, ಯಾವುದೇ ಪಕ್ಷ, ಜಾತಿ ಹಾಗೂ ಧರ್ಮಕ್ಕೆ ಸೀಮಿತವಾಗದೆ ಸಹಕಾರ ವಲಯ ಇನ್ನಷ್ಟು ಬಲಿಷ್ಠವಾಗಿ ಬೆಳೆಯಬೇಕು. ಸಹಕಾರಿ ಬ್ಯಾಂಕುಗಳಿಗೆ ಸರ್ಕಾರದ ಹಣವನ್ನು ಠೇವಣಿ ಇಡುವ ಮೂಲಕ ಶಕ್ತಿ ತುಂಬಬೇಕು ಎಂದು ತಿಳಿಸಿದರು.

ಯಾವುದೇ ಸರ್ಕಾರ ಬಂದರೂ ಸಹಕಾರಿ ರಂಗಕ್ಕೆ ಪೂರಕವಾಗಿ ಅಗತ್ಯವಾದ ಸಹಕಾರವನ್ನು ನೀಡುತ್ತಾ ಬಂದಿವೆ. ಅದೇ ರೀತಿ ನಮ್ಮ ಸರ್ಕಾರವು ಸಹಕಾರಿ ಕ್ಷೇತ್ರಕ್ಕೆ ಅವಶ್ಯವಿರುವ ಸಹಕಾರ ಹಾಗೂ ಹೆಚ್ಚಿನ ಶಕ್ತಿಯನ್ನು ತುಂಬಿದರೆ ಕರ್ನಾಟಕವೂ ಕೂಡ ಸಹಕಾರಿ ರಂಗದಲ್ಲಿ ಮಹಾರಾಷ್ಟ್ರ ಹಾಗೂ ಗುಜರಾತ್‌ಗಿಂತಲೂ ಹೆಚ್ಚಿನ ಸಾಧನೆಯನ್ನು ಮಾಡುತ್ತದೆ. ನಬಾರ್ಡ್ ತನ್ನ ಪಾಲಿನ ರಿಯಾಯಿತಿ ಸಕಾಲಕ್ಕೆ ಬಿಡುಗಡೆ ಮಾಡುವಂತೆ ಕ್ರಮವಹಿಸಬೇಕು. ವ್ಯವಸಾಯ ಹಾಗೂ ತೋಟಗಾರಿಕೆ ಕ್ಷೇತ್ರಕ್ಕೆ ಹೆಚ್ಚಿನ ಸಹಕಾರವನ್ನು ನೀಡುವ ಮೂಲಕ ರೈತಾಪಿ ವರ್ಗದವರಿಗೆ ಸಹಕಾರ ರಂಗ ಬೆನ್ನೆಲುಬಾಗಿ ನಿಲ್ಲಬೇಕು ಎಂದರು.



# ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರು / ಮಾಜಿ ನಿರ್ದೇಶಕರುಗಳು ಹಾಗೂ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ನಿರ್ದೇಶಕರುಗಳು


ಶ್ರೀ ರುದ್ರೇಗೌಡ


ಡಾ. ಟಿ.ಪಿ. ಯೋಗ


ಶ್ರೀ ಅರವಿಂದ ಬಿ. ಹೂಗಾರ


ಶ್ರೀ ಕೆ.ಸಿ. ಕೃಷ್ಣಪ್ಪ


ಶ್ರೀ ಆರ್.ಜಿ. ಶ್ರೀನಿವಾಸಮೂರ್ತಿ


ಶ್ರೀ ಅನಿಲ್ ಲೋಬೋ


ಶ್ರೀ ಯಶವಂತ ಹೆಚ್.ಎಂ.


ಶ್ರೀ ರಾಜಶೇಖರ್ ಎಂ.ಆರ್.

**ಬೆಂಗಳೂರು :** ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರಾದ ಶ್ರೀ ರುದ್ರೇಗೌಡ, ಮಹಾಮಂಡಳದ ಮಾಜಿ ನಿರ್ದೇಶಕರು ಹಾಗೂ ಪ್ರಸ್ತುತ ಬೆಂಗಳೂರು ಡಿ.ಸಿ.ಸಿ ಬ್ಯಾಂಕಿನ ನಿರ್ದೇಶಕರಾದ ಡಾ. ಟಿ.ಪಿ. ಯೋಗ, ಮಹಾಮಂಡಳದ ಮಾಜಿ ನಿರ್ದೇಶಕರು ಹಾಗೂ ಪ್ರಸ್ತುತ ವಿಜಯಪುರ ಜಿಲ್ಲಾ ಸರ್ಕಾರಿ ನೌಕರರ ಸಹಕಾರ ಬ್ಯಾಂಕಿನ ನಿರ್ದೇಶಕರಾದ ಶ್ರೀ ಅರವಿಂದ ಬಿ. ಹೂಗಾರ, ಕಾಳಿದಾಸ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಸಿ. ಕೃಷ್ಣಪ್ಪ, ದಾವಣಗೆರೆಯ ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್.ಜಿ. ಶ್ರೀನಿವಾಸಮೂರ್ತಿ, ದಿ ಮಂಗಳೂರು ಕ್ಯಾಥೋಲಿಕ್ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅನಿಲ್ ಲೋಬೋ, ಹಾಸನ ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಯಶವಂತ ಹೆಚ್.ಎಂ, ಬೆಂಗಳೂರು ಶ್ರೀ ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಎಂ.ಆರ್. ರಾಜಶೇಖರ್ ರವರುಗಳಿಗೆ 2023ನೇ ಸಾಲಿನ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರನ್ನು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ.ಪಾಟೀಲರವರು ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಹಾಗೂ ಮಹಾಮಂಡಳದ ನಿರ್ದೇಶಕ ಮಂಡಳಿ ಸದಸ್ಯರು, ಅಧಿಕಾರಿ ಸಿಬ್ಬಂದಿ ವರ್ಗದವರು ಅಭಿನಂದಿಸಿರುತ್ತಾರೆ.

## ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ನವರಿಗೆ 84ನೇ ವರ್ಷದ ಜನ್ಮದಿನದ ಶುಭಾಶಯಗಳು

**ಬೆಂಗಳೂರು :** ಮಹಾಮಂಡಳದಲ್ಲಿ ದಿನಾಂಕ: 23.11.2023 ರಂದು ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ನವರಿಗೆ 84ನೇ ವರ್ಷದ ಜನ್ಮದಿನದ ಶುಭಾಶಯಗಳನ್ನು ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ನಿರಂಜನ್ ಟಿ.ಎಸ್., ಶ್ರೀ ಹೆಚ್. ವಾಸು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಹಾಗೂ ಸಿಬ್ಬಂದಿ ವರ್ಗದವರು ಕೋರಿದರು.



### 70ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ

# ಸಹಕಾರದ ಮೂಲಕ ಅಬಲ ವರ್ಗದವರನ್ನು ಸಬಲೀಕರಣಗೊಳಿಸಲು ಸಾಧ್ಯ : ಶ್ರೀ ಜಿ.ಎಸ್. ಪಲ್ಲೇದ



**ಗದಗ** : 70ನೇ ಅಖಿಲ ಭಾರತ ಸಹಕಾರ ಸಪ್ತಾಹ–ಧ್ಯೇಯ : "5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧನೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು" ಅಂಗವಾಗಿ ಆರನೇ ದಿನ ದಿನಾಂಕ : 19.11.2023 ರಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಗದಗ ಜಿಲ್ಲಾ ಸಹಕಾರ ಯೂನಿಯನ್ ನಿ., ಗದಗ ಸಹಕಾರ ಇಲಾಖೆ, ಗದಗ ಕೆ.ಸಿ.ಸಿ. ಬ್ಯಾಂಕ್ ಲಿ., ಧಾರವಾಡ ಕೆ.ಎಂ.ಎಫ್. ಧಾರವಾಡ, ಗದಗ ಉಪವಿಭಾಗ, ದಿ ಮರ್ಚಂಟ್ಸ್ ಅರ್ಬನ್ ಕೋ–ಆಪ್ ಬ್ಯಾಂಕ್ ಲಿ., ಗದಗ ಹಾಗೂ ಗದಗ ತಾಲೂಕಿನ ಎಲ್ಲಾ ಸಹಕಾರ ಸಂಘ/ಬ್ಯಾಂಕುಗಳ ಸಂಯುಕ್ತ ಆಶ್ರಯದಲ್ಲಿ "ಮಹಿಳೆಯರು ಯುವಜನ ಮತ್ತು ಅಬಲ ವರ್ಗಕ್ಕೆ ಸಹಕಾರ ಸಂಸ್ಥೆಗಳು" ದಿನದ ಕಾರ್ಯಕ್ರಮವನ್ನು ದಿ ಮರ್ಚಂಟ್ಸ್ ಅರ್ಬನ್ ಕೋ–ಆಪ್ ಬ್ಯಾಂಕ್ ಲಿ., ಗದಗ ಇದರ ಸಭಾಭವನದಲ್ಲಿ ನೇರವೇರಿಸಲ್ಪಟ್ಟಿತು.

ವಿಶ್ರಾಂತ ಜಿಲ್ಲಾ ನ್ಯಾಯಾಧೀಶರಾದ ಹಾಗೂ ಗದಗ ಜಿಲ್ಲಾಧಿಕಾರಿಗಳ ಕಾನೂನು ಸಲಹೆಗಾರರು ಹಾಗೂ ದಿ ಮರ್ಚಂಟ್ಸ್ ಅರ್ಬನ್ ಕೋ–ಆಪ್ ಬ್ಯಾಂಕ ಲಿ., ಗದಗ ವೃತ್ತಿಪರ ನಿರ್ದೇಶಕರಾದ ಎಸ್.ಜಿ. ಪಲ್ಲೇದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಭಾರತವು ವಿಶ್ವದ ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾಗಿದೆ. ಯುವಜನರು ಮತ್ತು ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚಿನ ಜನರು ಆರ್ಥಿಕವಾಗಿ ಅಬಲರಾಗಿರುವವರಿದ್ದಾರೆ. ಈ ಸಂಖ್ಯೆಯು ವೇಗವಾಗಿ ಬೆಳೆಯುತ್ತಿದೆ. ಜಾಗತಿಕವಾಗಿ ಯುವಕ–ಯುವತಿಯರು ಭವಿಷ್ಯದಲ್ಲಿ ನವೋದ್ಯಮಿಗಳು, ಸೃಷ್ಟಿಕರ್ತರು ಮತ್ತು ನಾಯಕರು, ದುಡಿಯುವ ವಯಸ್ಸಿನ ಜನಸಂಖ್ಯೆಗೆ ಮಾರ್ಗಗಳನ್ನು ಕಂಡುಕೊಳ್ಳಬೇಕು. ವಿಶೇಷವಾಗಿ ಯುವಜನರು, ಮಹಿಳೆಯರು ಮತ್ತು ಅಬಲ ವರ್ಗದವರು, ಉದ್ಯೋಗ ಮತ್ತು ಇತರ ಆದಾಯ ಉತ್ಪಾದಿಸುವ ಚಟುವಟಿಕೆಗಳಿಗೆ ಅವಕಾಶಗಳನ್ನು ಪಡೆಯಲು ಸುಸಜ್ಜಿತರಾಗಿದ್ದಾರೆ. ಇದಕ್ಕಾಗಿ, ಯುವಜನರು ಮಹಿಳೆಯರು ಮತ್ತು ಸಮಾಜದ ಅಬಲ ವರ್ಗದವರನ್ನು ಸಬಲೀಕರಣಗೊಳಿಸಲು ಅನುಕೂಲಕರವಾದ ನೀತಿಗಳು ಮತ್ತು ಪರಿಣಾಮಕಾರಿ ಕಾರ್ಯ–ಯೋಜನೆಗಳನ್ನು ರೂಪಿಸಬೇಕಾಗಿದೆ. ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲರವರಿಂದ ಪ್ರಾರಂಭವಾದ ಸಹಕಾರ ಸಂಘ ಇಂದು ಎಲ್ಲಾ ರಂಗದಲ್ಲಿ ದೇಶವ್ಯಾಪಿ ಆವರಿಸಿಕೊಂಡಿದೆ ಎಂದು ಹೇಳಿದರು. ಗದಗ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಸಿ.ಎಂ. ಪಾಟೀಲ ಮಾತನಾಡುತ್ತಾ ಮಹಿಳಾ ಸಹಕಾರಿ ಸಂಘಗಳು ಕಿರು ಉದ್ದಿಮೆಗಳನ್ನು ಸ್ಥಾಪಿಸಲು ಸಾಲವನ್ನು ಒದಗಿಸುವುದು ಮಾತ್ರವಲ್ಲದೆ ಸಾಮಾಜಿಕ, ಆರ್ಥಿಕ ಮತ್ತು ಆರ್ಥಿಕವಾಗಿ ಸಬಲೀಕರಣಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮಹಿಳೆಯರು ಸಾಲ ಸೌಲಭ್ಯಗಳನ್ನು ಪಡೆಯಲು ಬ್ಯಾಂಕಿಂಗ್ ವ್ಯವಸ್ಥೆಯನ್ನು ಪ್ರವೇಶಿಸಲು ಸಾಧ್ಯವಾಗದ ಕಾರಣ ಮಹಿಳಾ ಸಹಕಾರಿ ಸಂಘಗಳ ಅಗತ್ಯವು ಅತ್ಯಂತ ಮಹತ್ವದ್ದಾಗಿದೆ. ಮಹಿಳೆಯರು ಒಟ್ಟಾಗಿ ಸಹಕಾರ ಕಕ್ಷೆಯೊಳಗೆ ಬಂದರೆ ಮಹಿಳೆಯರು ಸ್ವಾವಲಂಬಿಗಳಾಗುವುದರ ಜತೆಗೆ ಕುಟುಂಬ ನಿರ್ವಹಣೆ ಮತ್ತು ಗ್ರಾಮೀಣ ಪ್ರದೇಶದ, ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಉನ್ನತಿ ಸಾಧ್ಯವಾಗುತ್ತದೆ ಎಂದು ಹೇಳಿದರು.

ಗುರುರಾಜ ಬಳಗಾನೂರವರು ಮಾತನಾಡುತ್ತಾ 'ಎಲ್ಲರಿಗಾಗಿ ನಾನು ನನಗಾಗಿ ಎಲ್ಲರು' ಎಂಬ ಮೂಲ ತತ್ವ ಸಹಕಾರದ್ದಾಗಿದೆ. ಮಹಿಳೆಯರು ಒಟ್ಟಾಗಿ ಸಹಕಾರ ಕಕ್ಷೆಯೊಳಗೆ ಬಂದರೆ ಮಹಿಳೆಯರು ಸ್ವಾವಲಂಬಿಗಳಾಗುವುದರ ಜತೆಗೆ ಕುಟುಂಬ ನಿರ್ವಹಣೆ ಮತ್ತು ಗ್ರಾಮೀಣ ಪ್ರದೇಶದ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಉನ್ನತಿ ಸಾಧ್ಯವಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ನಾವು ಗ್ರಾಮೀಣ ಭಾಗದಲ್ಲಿ ಸ್ವ–ಸಹಾಯ ಗುಂಪುಗಳ ಮಹಿಳಾ ಹಾಗೂ ಮಹಿಳಾ ಸಹಕಾರ ಸಂಘಗಳು ಮಹಿಳಾ ಸಬಲೀಕರಣದಲ್ಲಿ ವಿಶೇಷವಾದ ಪಾತ್ರವನ್ನು ನಿರ್ವಹಿಸುತ್ತರುವುದನ್ನು ನೋಡಬಹುದು. ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಕೆ.ಎಸ್. ಚೆಟ್ಟಿ, ಉಪಾಧ್ಯಕ್ಷರಾದ ಚಂದ್ರು ಬಾಳಿಹಳ್ಳಿಮಠ, ವೃತ್ತಿಪರ ಹಿರಿಯ ನಿರ್ದೇಶಕರಾದ ಎಸ್.ಜಿ. ಪಲ್ಲೇದ, ನಿರ್ದೇಶಕರಾದ ಎಸ್.ಬಿ. ಗಡಾದ, ಆರ್ಬೂದ್ ಕೋ–ಆಪ್ ಬ್ಯಾಂಕಿನ ನಿರ್ದೇಶಕರಾದ ಇಕ್ಬಾಲ್ ಹಣಗಿ, ಶಿವಸಂಗಮ ಸೌಹಾರ್ದ ಸಹಕಾರಿ ಸಂಘ ನಿ., ಗದಗ ಉಪಾಧ್ಯಕ್ಷರಾದ ಮಹೇಶ ಜಿ. ಗಾಣಗೇರ, ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಎನ್.ಎನ್. ಸರಾಫ್, ಗದಗ ಸಹಕಾರ ಅಭಿವೃದ್ಧಿ ಅಧಿಕಾರಿಗಳಾದ ಎಚ್.ಎಂ. ಶಾಂತಾ, ಕೆ.ಸಿ.ಸಿ. ಬ್ಯಾಂಕ್ ಲಿ., ಗದಗ ಇದರ ಜಿಲ್ಲಾ ನಿಯತ್ರಣಾಧಿಕಾರಿಗಾದ, ಬಿ.ಎಂ. ಮುಧೋಳ, ಆರ್ಬೂದ್ ಕೋ–ಆಪ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಎ.ಜಿ. ಯರಗುಡಿ, ಧಾರವಾಡ ಹಾಲು ಒಕ್ಕೂಟದ ಜಿಲ್ಲಾ ಮುಖ್ಯಸ್ಥರಾದ ಪ್ರಸನ್ಎಸ್. ಪಟ್ಟೇದ ಹಾಗೂ ವಿಸ್ತರಣಾಧಿಕಾರಿಗಳಾದ ಕಿರಣಕುಮಾರ ಎ. ಹುಗ್ಗಿ ರವರು ಉಪಸ್ಥಿತರಿದ್ದರು.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

**ಬೆಂಗಳೂರು** : ದಿ ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕಿನ 2022-23ನೇ ಸಾಲಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ. ರಮೇಶ್‌ರವರು ಮಹಾಮಂಡಳದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರಿಗೆ ಸಲ್ಲಿಸಿದರು.



## ಚೈತನ್ಯ ಮಹಿಳಾ ಸಹಕಾರ ಬ್ಯಾಂಕ್ ನಿ., ವಿಜಯಪುರ : ನೂತನ ಶಾಖೆಗಳ ಉದ್ಘಾಟನೆ

**ವಿಜಯಪುರ** : ದಿನಾಂಕ : 09-11-2023 ರಂದು ಕಾಳಿದಾಸ ಕಾಂಪ್ಲೇಕ್ಸ, ಅಥಣಿ ರಸ್ತೆ ವಿಜಯಪುರದಲ್ಲಿ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ ಇವರ ಅಧ್ಯಕ್ಷತೆಯಲ್ಲಿ 6ನೇ ಶಾಖೆಯನ್ನು ಪ್ರಾರಂಭಿಸಲು ಪರಮಪೂಜ್ಯ ಶ್ರೀ ಬಸವಲಿಂಗ ಸ್ವಾಮಿಗಳು, ಅಧ್ಯಕ್ಷ ಗುರುಗಳು, ಜ್ಞಾನ ಯೋಗಾಶ್ರಮ ವಿಜಯಪುರ ಇವರ ದಿವ್ಯಸಾನಿಧ್ಯದೊಂದಿಗೆ ಹಾಗೂ ಉದ್ಘಾಟಕರಾದ ಶ್ರೀ ಹೊನ್ನಪ್ಪಗೌಡ ಕರಿಗೌಡರ ನಿವೃತ್ತ ಪ್ರಿನ್ಸಿಪಾಲರು ಆಯುರ್ವೇದ ಮಹಾವಿದ್ಯಾಲಯ ಇವರು ಉದ್ಘಾಟನೆ ಮಾಡುವುದರ ಮೂಲಕ ಹೆಣ್ಣುಮಕ್ಕಳು ಮನಸ್ಸು ಮಾಡಿದರೆ ಏನೆಲ್ಲ ಸಾಧಿಸಬಹುದು ಎಂಬುದಕ್ಕೆ ಉದಾಹರಣೆ ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕು ಎಂದು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀಮತಿ ಭಾಗ್ಯಶ್ರೀ ಎಸ್.ಕುಂಬಾರ ಸಹಕಾರಿ ಸಂಘಗಳ ಉಪ ನಿಬಂಧಕರು ವಿಜಯಪುರ ಮಾತನಾಡಿದರು. ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ ಇವರು ಬ್ಯಾಂಕು ಆಧುನಿಕ ವಿದ್ಯಮಾನಗಳ ಪ್ರಕಾರ ತನ್ನ ಗ್ರಾಹಕರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸುತ್ತಿದ್ದು ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಎಂದು ಹೇಳಿದರು.




ಕೊನೆಯದಾಗಿ ದಿವ್ಯಸಾನಿಧ್ಯ ವಹಿಸಿದಂತ ಸ್ವಾಮೀಜಿಯವರು ಬ್ಯಾಂಕು ಉತ್ತರೋತ್ತರವಾಗಿ ಬೆಳೆದು ಬರುವ ದಿನಗಳಲ್ಲಿ ಹೆಚ್ಚಿನ ಶಾಖೆಗಳನ್ನು ತೆರೆಯಲಿ ಎಂದು ಆಶೀರ್ವದಿಸಿದರು.






ದಿನಾಂಕ : 10-11-2023 ರಂದು ಲಕ್ಷ್ಮೀ ನಗರ ಸಾಯಿ ಪಾರ್ಕ ರಸ್ತೆಯ ವಿಜಯಪುರದಲ್ಲಿ ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ ಇವರ ಅಧ್ಯಕ್ಷತೆಯಲ್ಲಿ 7ನೇ ಶಾಖೆಯನ್ನು ಪ್ರಾರಂಭಿಸಲು ಪರಮಪೂಜ್ಯ ಶ್ರೀ ಬಸವಲಿಂಗ ಸ್ವಾಮಿಗಳು, ಅಧ್ಯಕ್ಷ ಗುರುಗಳು, ಜ್ಞಾನ ಯೋಗಾಶ್ರಮ ವಿಜಯಪುರ ಇವರ ದಿವ್ಯಸಾನಿಧ್ಯದೊಂದಿಗೆ ಹಾಗೂ ಉದ್ಘಾಟಕರಾದ ಶ್ರೀ ಸುರೇಶ ಎಸ್ ದೇಸಾಯಿ ಅಧ್ಯಕ್ಷರು ಶ್ರೀ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮಾ ಸಂಸ್ಥೆ ವಿಜಯಪುರ ಇವರು ಉದ್ಘಾಟನೆ ಮಾಡುವುದರ ಮೂಲಕ ಹೆಣ್ಣುಮಕ್ಕಳು ಯಾವುದೇ ಒಂದು ಕೆಲಸ ಮಾಡಿದರೆ ಅದನ್ನು ಅಚ್ಚು ಕಟ್ಟಾಗಿ ದಕ್ಷತೆ ಪ್ರಾಮಾಣಿಕತೆಯಿಂದ ಮಾಡುವರು ಅದಕ್ಕೆ ಉದಾಹರಣೆ ನಮ್ಮೆಲ್ಲರ ಆತ್ಮೀಯ ಸಹೋದರಿಯಾದ ಮಲ್ಲಮ್ಮ ಯಾಳವಾರ ಅವರು ಬೆಳಸಿದ ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕ ಸಾಕ್ಷಿ ಅವರಿಂದ ಬ್ಯಾಂಕಿನ ಆಡಳಿತವನ್ನು ಯಾವ ರೀತಿ ನಡೆಸಿಕೊಂಡು ಹೋಗಬೇಕೆಂದು ನಾವು ಕಲಿಯಬೇಕು ಎಂದು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಚೇತನ ಭಾವಿಕಟ್ಟಿ ಇವರು ಕೂಡಾ ಉಪಸ್ಥಿತರಿದ್ದರು. ಅದೇ ರೀತಿಯಾಗಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ ಇವರು ಬ್ಯಾಂಕು ಇಷ್ಟು ಅಭಿವೃದ್ಧಿ ಹೊಂದಲು ಎಲ್ಲ ಆಡಳಿತ ಮಂಡಳಿಯ ಸಹಕಾರ ಮತ್ತು ಬೆಂಬಲವೆ ಕಾರಣ ಎಂದು ಮಾತನಾಡಿದರು. ಕೊನೆಯದಾಗಿ ದಿವ್ಯಸಾನಿಧ್ಯ ವಹಿಸಿದಂತ ಸ್ವಾಮೀಜಿಯವರು ಬ್ಯಾಂಕು ಉತ್ತರೋತ್ತರವಾಗಿ ಬೆಳೆದು ಬರುವ ದಿನಗಳಲ್ಲಿ ಹೆಚ್ಚಿನ ಶಾಖೆಗಳನ್ನು ತೆರೆಯಲಿ ಎಂದು ಆಶೀರ್ವದಿಸಿದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ







▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕು 2021ರಲ್ಲಿ ರೂ.2.00 ಕೋಟಿ ಮೊತ್ತದ ಆದ್ಯತಾ ವಲಯದ ಸಾಲ ಪ್ರಮಾಣ ಪತ್ರಗಳನ್ನು ಖರೀದಿಸಿತ್ತು. ಇದರಿಂದ ನಮ್ಮ ಆದ್ಯತಾ ವಲಯದ ಸಾಲ ಗುರಿ ತಲುಪಲು ಸಾಧ್ಯವಾಗಿತ್ತು. ಈಗ ನಮಗೆ ಕೇಂದ್ರೀಯ ಅಬಕಾರಿ ಮಂಡಳಿಯಿಂದ ಈ ಪ್ರಮಾಣ ಪತ್ರಗಳ ಮೇಲೆ ತೆರಿಗೆ (ಜಿ.ಎಸ್.ಟಿ) ಪಾವತಿ ಮಾಡಿಲ್ಲವೆಂದು ನೋಟೀಸ್ ಬಂದಿದೆ. ಈ ವಿಷಯ ನಮಗೆ ಹೊಸತಾದುದರಿಂದ ದಯವಿಟ್ಟು ನಮಗೆ ಮಾರ್ಗದರ್ಶನ ಮಾಡಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಕೇಂದ್ರೀಯ ಅಬಕಾರಿ ಮಂಡಳಿ ತನ್ನ ಅಧಿಸೂಚನೆ ಸಂಖ್ಯೆ 11/2018ರ ರೀತ್ಯಾ ತನ್ನ ಅಧಿಸೂಚನೆ ಸಂಖ್ಯೆ 4/2017 ಕೇಂದ್ರ ತೆರಿಗೆದರದಲ್ಲಿ ತಿದ್ದುಪಡಿ ಮಾಡಿದೆ. ಅದರಂತೆ, ದಿನಾಂಕ : 28.05.2018ರ ನಂತರ ಆದ್ಯತಾ ವಲಯದ ಸಾಲ ಪ್ರಮಾಣ ಪತ್ರಗಳಲ್ಲಿ ನಡೆಯುವ ಎಲ್ಲಾ ವ್ಯಾಪಾರ ವಹಿವಾಟುಗಳ ಸಂದರ್ಭದಲ್ಲಿ ರಿವರ್ಸ್ ಚಾರ್ಜ್ ಅಡಿಯಲ್ಲಿ ಪ್ರಮಾಣ ಪತ್ರವನ್ನು ಸ್ವೀಕರಿಸುವವರು ಜಿ.ಎಸ್.ಟಿ (ತೆರಿಗೆ) ತೆರಬೇಕು. ಆದ್ದರಿಂದ, ಪ್ರಮಾಣ ಪತ್ರವನ್ನು ನೀಡುವ ಬ್ಯಾಂಕು ಜಿ.ಎಸ್.ಟಿ. ವಿಧಿಸುವ ಮತ್ತು ಸಂಗ್ರಹಿಸುವ ಅಗತ್ಯವಿಲ್ಲ. ಪ್ರಮಾಣ ಪತ್ರವನ್ನು ಸ್ವೀಕರಿಸುವ ಬ್ಯಾಂಕು ಜಿ.ಎಸ್.ಟಿ. ತೆತ್ತ ನಂತರ ಅದು ಇನ್ ಪುಟ್ ಟ್ಯಾಕ್ಸ್ ಕ್ರೆಡಿಟ್‌ಗೆ ಅರ್ಹವಾಗಿರುತ್ತದೆ. ಆದ್ಯತಾ ವಲಯದ ಸಾಲ ಪ್ರಮಾಣ ಪತ್ರಗಳನ್ನು ಮಾರಾಟ ಮಾಡಿದಾಗ ಅದು ಪ್ರತಿನಿಧಿಸುವ ಸಾಲದ ಸ್ವತ್ತುಗಳಿಗೆ ಸಂಬಂಧಿಸಿದ ಹಕ್ಕುಗಳು / ಬಾಧ್ಯತೆಗಳು ಖರೀದಿಸಿದ ಬ್ಯಾಂಕಿನ ಹೆಸರಿಗೆ ವರ್ಗಾವಣೆಯಾಗುವುದಿಲ್ಲ. ಆದ್ಯತಾ ವಲಯದ ಸಾಲ ಪ್ರಮಾಣಪತ್ರಗಳ ಮೌಲ್ಯವು ಕಾಲ್ಪನಿಕ (Notional) ವಾಗಿದ್ದು, ಅದನ್ನು ಕೇವಲ ಆದ್ಯತಾ ವಲಯದ ಸಾಲಗಳ ಗುರಿಯನ್ನು ಸಾಧಿಸುವ ಉದ್ದೇಶಕ್ಕಾಗಿ ಮಾತ್ರ ಬಳಸಬೇಕು. ಆದ್ದರಿಂದ, ನಮ್ಮ ಅಭಿಪ್ರಾಯದಲ್ಲಿ ಜಿ.ಎಸ್.ಟಿ.ಯನ್ನು ಖರೀದಿದಾರರು ಕಾಲ್ಪನಿಕ ಮೌಲ್ಯ, ಅಂದರೆ, ಮಾರಾಟ ಮಾಡುವ ಬ್ಯಾಂಕಿಗೆ ಪಾವತಿಸಿದ ಶುಲ್ಕಗಳ ಮೇಲೆ ತೆರಬೇಕು. ಹಾಗಾಗಿ, ಅಬಕಾರಿ ಇಲಾಖೆಯೊಂದಿಗೆ ವಿಷಯ ಪ್ರಸ್ತಾಪಿಸಿ.

## ನಿಯಮ ಪಾಲಿಸದ ಸಿಟಿ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಇಂಡಿಯನ್ ಓವರ್ಸೀಸ್ ಬ್ಯಾಂಕಿಗೆ 10.34 ಕೋಟಿ ದಂಡ ವಿಧಿಸಿದ ರಿಸರ್ವ್ ಬ್ಯಾಂಕ್




**ನವದೆಹಲಿ :** ನಿಯಮಗಳನ್ನ ಪಾಲಿಸದ ಕಾರಣ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಸಿಟಿ ಬ್ಯಾಂಕಿಗೆ ರೂ. 5 ಕೋಟಿ, ಬ್ಯಾಂಕ್ ಆಫ್ ಬರೋಡಾಗೆ ರೂ. 4.34 ಕೋಟಿ, ಇಂಡಿಯನ್ ಓವರ್ಸೀಸ್ ಬ್ಯಾಂಕಿಗೆ ರೂ. 1 ಕೋಟಿ ದಂಡ ವಿಧಿಸಿದೆ.

ಆರ್‌ಬಿಐ ಪ್ರಕಾರ, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949ರ ಸೆಕ್ಷನ್ 26 ಎ ಮತ್ತು ಠೇವಣಿ ಶಿಕ್ಷಣ ಮತ್ತು ಜಾಗೃತಿ ನಿಧಿ ಯೋಜನೆ, 2014 – ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949ರ ಸೆಕ್ಷನ್ 26ಎ – ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, 1949ರ ಸೆಕ್ಷನ್ 26ಎ – ಕಾರ್ಯಾಚರಣಾ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ್ದಕ್ಕಾಗಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಆದೇಶದ ಮೂಲಕ ಸಿಟಿಬ್ಯಾಂಕ್ ಎನ್‌ಎಗೆ 5.00 ಕೋಟಿ ರೂ.ಗಳ ವಿತ್ತೀಯ ದಂಡವನ್ನು ವಿಧಿಸಿದೆ.

ಬಿಆರ್ ಕಾಯ್ದೆಯ ಸೆಕ್ಷನ್ 10 (1) (ಬಿ) (ii) ಮತ್ತು ಬ್ಯಾಂಕುಗಳು ಹಣಕಾಸು ಸೇವೆಗಳ ಹೊರಗುತ್ತಿಗೆಯಲ್ಲಿ ಅಪಾಯಗಳು ಮತ್ತು ನೀತಿ ಸಂಹಿತೆಯನ್ನು ನಿರ್ವಹಿಸುವುದು ಕುರಿತು ಆರ್‌ಬಿಐ ನಿರ್ದೇಶನಗಳನ್ನು ಪಾಲಿಸದಿರುವುದು ಮತ್ತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ನಿರ್ದೇಶನ, 2016 ಎಂದು ತಿಳಿಸಿದೆ.

ಸಿಟಿಬ್ಯಾಂಕ್ (i) ಅರ್ಹ ಮೊತ್ತವನ್ನು ನಿಗದಿತ ಅವಧಿಯೊಳಗೆ ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಗೆ ಜಮಾ ಮಾಡಲು ವಿಫಲವಾಗಿದೆ, (ii) ತನ್ನ ಕೆಲವು ಸಿಬ್ಬಂದಿ ಸದಸ್ಯರಿಗೆ ಕಮಿಷನ್ ರೂಪದಲ್ಲಿ ಸಂಭಾವನೆಯನ್ನು ಪಾವತಿಸಿದೆ ಮತ್ತು (iii) ಎಎಂಎಲ್ (ಮನಿ ಲಾಂಡರಿಂಗ್ ವಿರೋಧಿ) ಎಚ್ಚರಿಕೆಗಳ ಹೊರಗುತ್ತಿಗೆ ಮೇಲ್ವಿಚಾರಣೆ ಮತ್ತು ವಿಲೇವಾರಿ / ಮುಚ್ಚುವಿಕೆ (ನಿರ್ಧಾರ ತೆಗೆದುಕೊಳ್ಳುವ ಕಾರ್ಯ) ಗ್ರೂಪ್ ಕಂಪನಿಗೆ ಬಹಿರಂಗಪಡಿಸಿದೆ ಎಂದು ಅದು ಹೇಳಿದೆ.

## ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಕೇರಳದಲ್ಲಿ ಕೂಲಿ ಕೆಲಸ ಮಾಡುವ ಬಿಹಾರ ಮೂಲದ ಮಹಿಳೆಯನ್ನು ಶಸ್ತ್ರಚಿಕಿತ್ಸೆಗಾಗಿ ಎರ್ನಾಕುಲಂ ಜನರಲ್ ಆಸ್ಪತ್ರೆಗೆ ದಾಖಲಿಸಲಾಗಿದ್ದ ಸಮಯದಲ್ಲಿ ಆಕೆಯ ನಾಲ್ಕು ತಿಂಗಳ ಮಗುವಿಗೆ ಎದೆ ಹಾಲುಣಿಸುವ ಮೂಲಕ ಕೊಚ್ಚಿ ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರು ತಾಯಿ ಪ್ರೀತಿ ತೋರಿಸಿದ್ದಾರೆ.
- ಉಡುಪಿಯ ಶಾಲೆಯಲ್ಲಿ 7ನೇ ತರಗತಿ ಓದುತ್ತಿರುವ ಬಾಲಕ ಧೀರಜ್ ಐತಾಳ್ ಬರಿಗೈಯಲ್ಲೇ ಬೃಹತ್ ಹೆಬ್ಬಾವನ್ನು ಹಿಡಿದಿರುವ ವಿಡಿಯೋವೊಂದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ವೈರಲ್ ಆಗುತ್ತಿದೆ.
- ಶಹಾಪುರದ ಸುರಪುರ ಇತಿಹಾಸ ಸಂಶೋಧನ ಕೇಂದ್ರದ ಅಧ್ಯಕ್ಷರಾದ ಭಾಸ್ಕರ ರಾವ್ ಮುಡಬೂಳ್ ಅವರು ವಿಶ್ವವಿಖ್ಯಾತ ಕೊಹಿನೂರ್ ವಜ್ರವನ್ನು ನಮ್ಮ ಕರ್ನಾಟಕದ ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಪುಟ್ಟ ಗ್ರಾಮ ಕೊಳ್ಳೂರದಲ್ಲಿ ಗಣಿಗಾರಿಕೆ ಮಾಡಲಾಗಿದೆ ಎಂದು ದಾಖಲೆಗಳ ಮೂಲಕ ಪ್ರತಿಪಾದಿಸಿದ್ದಾರೆ.
- ಆಸ್ಟ್ರೇಲಿಯಾದ ಕ್ರಿಕೆಟ್ ವಿಶ್ವಕಪ್‌ನ ಯಶಸ್ಸಿನ ಹಿಂದೆ ಆ ತಂಡದ ಮ್ಯಾನೇಜರ್ ಆಗಿರುವ ಮಂಗಳೂರಿನ ಊರ್ಮಿಳಾ ರೊಸಾರಿಯೊ ಅವರ ಪಾಲಿದೆ. ಊರ್ಮಿಳಾ ಅವರ ಮಂಗಳೂರು ಸಮೀಪದ ಕಿನ್ನಿಗೋಳಿ ಮೂಲದ ಐವಿ ಮತ್ತು ವ್ಯಾಲೆಂಟೈನ್ ರೊಸಾರಿಯೋ ದಂಪತಿಯ ಪುತ್ರಿ.
- ಬೆಂಗಳೂರಿನಲ್ಲಿ ಅಲಂಕಾರಿಕ ಮೀನುಗಳ ಮಾರುಕಟ್ಟೆಯ ಆದಾಯ ಸುಮಾರು ರೂ.100 ಕೋಟಿ ಆಗಿದ್ದು ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರದ ಪ್ರಕಾರ, ನಗರದಲ್ಲಿ ಸುಮಾರು 2,500 ಚಿಲ್ಲರೆ ಅಂಗಡಿಗಳು ಲಾಭದಾಯಕ ವ್ಯಾಪಾರ ನಡೆಸುತ್ತಿವೆ.
- ಬಿಹಾರದ ಬಕ್ಸರ್ ಜಿಲ್ಲೆಯ ಚೋಟ್ಕ ನೈನಿಜೋರ್ ಗ್ರಾಮದ ಭರತ್ ಯಾದವ್ ಅವರ ಪತ್ನಿ 32 ವರ್ಷದ ಜ್ಞಾನತಿ ದೇವಿ ಏಕಕಾಲದಲ್ಲಿ ನಾಲ್ಕು ಮಕ್ಕಳಿಗೆ ಜನ್ಮ ನೀಡಿದ್ದು, ಆ ಕುಟುಂಬದೊಂದಿಗೆ ಇಡೀ ಗ್ರಾಮದ ಜನರು ಸಂತೋಷದಿಂದ ನವಜಾತ ಶಿಶುಗಳ ಆರೈಕೆಗಾಗಿ ಒಟ್ಟಾಗಿದ್ದಾರೆ.
- ಕನಾಟಕ ರಾಜ್ಯ ಸರ್ಕಾರದ ಗೃಹ ಆರೋಗ್ಯ ಯೋಜನೆ ಮೂಲಕ ವೈದ್ಯರ ತಂಡ ಪ್ರತಿ ಮನೆಗೆ ತೆರಳಿ ರಕ್ತದೊತ್ತಡ, ಮಧುಮೇಹ, ಮೂರು ಬಗೆಯ ಸಾಮಾನ್ಯ ಕ್ಯಾನ್ಸರ್ ಕಾಯಿಲೆ ಪರೀಕ್ಷೆ ನಡೆಸಲು ಯೋಜನೆ ಸಿದ್ಧಪಡಿಸಲಾಗಿದ್ದು, ಪ್ರಾಯೋಗಿಕವಾಗಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಯೋಜನೆ ಆರಂಭಿಸಲಾಗುತ್ತಿದೆ.

## ಓ ದು ಗ ರ ಅ ನಿ ಸಿ ಕೆ . . .



**ಸಹಕಾರ ಕ್ರಾಂತಿಯೇ ಆಗಲಿದೆ :** ರಾಜ್ಯದಲ್ಲಿ ಮುಖ್ಯವಾಗಿ ಯುವಕರು ಸಹಕಾರ ಕ್ಷೇತ್ರದಲ್ಲಿ ಭಾಗಿಗಳಾದಲ್ಲಿ ಆರ್ಥಿಕ ಚಟುವಟಿಕೆ ಹೆಚ್ಚಾಗಲಿದೆ. ಈ ಕಾರಣಕ್ಕಾಗಿ ಯುವಕರು ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಹಕಾರ ಕ್ಷೇತ್ರದ ಪ್ರಯೋಜನಗಳ ಬಗ್ಗೆ ಪ್ರಚಾರ ಕೈಗೊಂಡಲ್ಲಿ, ಸಹಕಾರ ಕ್ಷೇತ್ರ ಜನಾಂದೋಲನವಾಗಲಿದೆ, ಧ್ವನಿ ಇಲ್ಲದವರಿಗೆ ಧ್ವನಿಯಾಗಲಿದೆ. ಇಡೀ ರಾಜ್ಯದಲ್ಲಿ ಸಹಕಾರ ಕ್ರಾಂತಿಯೇ ಆಗಲಿದೆ.

**▸▸ ಆನಂದ ಪಿ.ಎನ್., ಬಳ್ಳಾರಿ**

**ಕೊನೆಗೂ ಒಪ್ಪಿಕೊಂಡಂತಾಯ್ತು! :** ವಿತ್ತೀಯ ವ್ಯವಸ್ಥೆಯಲ್ಲಿ ಪೂರೈಕೆ ಖಾತರಿಯಿಂದ ಚಿಲ್ಲರೆ ಹಣದುಬ್ಬರವನ್ನು ಸಮತೋಲನದಲ್ಲಿ ಇರಿಸಲಾಗಿದೆ. ಆದರೆ, ನಾವಿನ್ನೂ ಸಮಸ್ಯೆಯಿಂದ ಸಂಪೂರ್ಣ ಹೊರಬಂದಿಲ್ಲ ಅರ್ಥವ್ಯವಸ್ಥೆ ಸಬಲಗೊಳ್ಳಲು ಮತ್ತಷ್ಟು ದೂರ ಶ್ರಮಿಸಬೇಕಿದೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ನಮ್ಮ ಅರ್ಥವ್ಯವಸ್ಥೆ ಸರಿಹೋಗಲು ತುಂಬಾ ದಿನಗಳು ಬೇಕಿದೆ ಎನ್ನುವುದನ್ನು ಆರ್‌ಬಿಐ ಕೊನೆಗೂ ಒಪ್ಪಿಕೊಂಡಂತಾಯ್ತು!

**▸▸ ಹಂಪನಗೌಡ ಪಾಟೀಲ, ಬಿಜಾಪುರ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.